

# ಸಾವಧಾನ ಪ್ರಧಾನ ನ್ಯೂಜಿಲೆಂಡ್ ವಿಕ್ರಮ

**ಟೆಸ್ಟ್ ಕ್ರಿಕೆಟ್‌ನಲ್ಲಿ ಯಾಕೆ ಅವುಡುಗಚ್ಚಿ ಆಡಬೇಕು ಎನ್ನುವುದನ್ನು ಕೇನ್ ವಿಲಿಯಮ್ಸನ್ ನೇತೃತ್ವದ ನ್ಯೂಜಿಲೆಂಡ್ ತಂಡ ಡಬ್ಲ್ಯುಟಿಸಿ ಫೈನಲ್‌ನಲ್ಲಿ ತಲೆಮೇಲೆ ಹೊಡೆದಂತೆ ಸಾರಿತು. ಸದಾ ಕಾಲ ಪಂತ್ ದಾಳಿಕೋರ ಆಟವೇ ಫಲ ನೀಡದು ಎನ್ನುವುದರ ಪಾಠವೂ ಆದರಲ್ಲಿತ್ತು.**

**■ ವಿಶಾಖ ಎನ್.**

**2014**ರ ಫೆಬ್ರುವರಿಯಲ್ಲಿ ಭಾರತದ ವಿರುದ್ಧ ಒಂದು ಕ್ರಿಕೆಟ್ ಟೆಸ್ಟ್ ಪಂದ್ಯ ನಡೆದಿತ್ತು. ನ್ಯೂಜಿಲೆಂಡ್ ಸೋಲುವ ಎಲ್ಲ ಸಾಧ್ಯತೆಗಳೂ ಎರಡನೇ ಇನಿಂಗ್ಸ್‌ನಲ್ಲಿ ಇದ್ದಂತಹ ಘಟ್ಟ. ಆಗ ಆರನೇ ವಿಕೆಟ್‌ಗೆ ಬ್ರೆಂಡನ್ ಮೆಕ್ಲಮ್ ಜತೆಗೂಡಿ 300ಕ್ಕೂ ಹೆಚ್ಚು ರನ್ ಸೇರಿಸಿ, ಡ್ರಾ ಒಂದೇ ದಾರಿ ಎಂಬಂತೆ ಸ್ಥಿತಿ ಬದಲಿಸಿದ್ದು ಬಿ.ಜೆ. ವಾಟ್ಲಿಂಗ್ ಎಂಬ ತಣ್ಣಗಿನ ಸ್ವಭಾವದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್. ಆ ಇನಿಂಗ್ಸ್‌ನಲ್ಲಿ ವಾಟ್ಲಿಂಗ್ ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಮೂರನೇ ಶತಕ ದಾಖಲಿಸಿದರು. ಟೆಸ್ಟ್ ಆಡುವ ಹನ್ನೊಂದು ಮಂದಿಯಲ್ಲಿ ಅವರು ಇರಲೇಬೇಕೆಂಬ ಸಂದೇಶವನ್ನು ಕೊಟ್ಟಂಥ ಇನಿಂಗ್ಸ್ ಅದು.

ಜೂನ್ 23ರಂದು ಮುಕ್ತಾಯವಾದ ‘ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್’ (ಡಬ್ಲ್ಯುಟಿಸಿ) ಫೈನಲ್‌ನಲ್ಲಿ ಅದೇ ವಾಟ್ಲಿಂಗ್ ವಿಕೆಟ್ ಕೀಪರ್. ಅವರ ವೃತ್ತಿಬದುಕಿನ ಕೊನೆಯ ಪಂದ್ಯ ಅದು. ಎರಡನೇ ಇನಿಂಗ್ಸ್‌ನಲ್ಲಿ ಭಾರತದ ರವೀಂದ್ರ ಜಡೇಜಾ, ರಿಷಭ್ ಪಂತ್ ಒಂದೊಂದು ರನ್‌ಗಳನ್ನು ಕದಿಯತೊಡಗಿದಾಗ, ಒಮ್ಮೆ ನಾಯಕ ವಿಲಿಯಮ್ಸನ್ ಜೋರಾಗಿ ಎಸೆದ ಚೆಂಡು ವಾಟ್ಲಿಂಗ್ ಉಂಗುರದ ಬೆರಳಿಗೆ ಬಡಿಯಿತು. ಬೆರಳಿನ ಮೂಳೆ ಸ್ಥಾನ ಬದಲಿಸಿದಂತಾದದ್ದೇ ಅವರಿಗೆ ನೋವು. ಚೀರಾಡದ, ಮೌನವನ್ನೇ ಹೆಚ್ಚು ತುಳುಕಿಸುವ ಅವರತ್ತ ತಕ್ಷಣ ಫಿಸಿಯೊ ಟಾಮಿ ಸಿಮ್‌ಸೆಕ್ ಓಡೋಡಿ ಬಂದರು. ಪೆಟ್ಟುಬಿದ್ದ ಬೆರಳನ್ನು ಹಿಡಿದೆತ್ತಿ ಯಥಾಸ್ಥಾನಕ್ಕೆ ನಿಲ್ಲಿಸಿದರು. ಇನ್ನಷ್ಟು ಚಿಕಿತ್ಸೆಗೆಂದು ಅವರು ಪೆವಿಲಿಯನ್‌ಗೆ ಹೋಗುವುದು ಅನಿವಾರ್ಯವಾಯಿತು. ಆಗ ಟಾಮ್ ಬ್ಲಂಡೆಲ್ ಅವರ ಜಾಗಕ್ಕೆ ಬಂದರು. ‘ಕೊನೆಯ ಟೆಸ್ಟ್‌ನ ಆಟ ಹೀಗೆ ಮುಗಿಯಬಾರದಿತ್ತಲ್ಲ, ಛೆ’ ಎಂದುಕೊಳ್ಳುವ ಹೊತ್ತಿಗೇ ಊಟದ ನಂತರದ ಅವಧಿಯಲ್ಲಿ ಮತ್ತೆ ವಾಟ್ಲಿಂಗ್ ಕಣಕ್ಕಿಳಿದರು. ನೀಲ್ ವಾಗ್ನರ್ ಪಂತ್ ಹಾಗೂ ಜಡೇಜ ಇಬ್ಬರಿಗೂ ಅರೌಂಡ್ ದಿ ವಿಕೆಟ್ ಬೌಲ್ ಮಾಡತೊಡಗಿದರು. ಹೀಗೆ ವೇಗಿಯೊಬ್ಬ ಎಸೆತಗಳನ್ನು ಹಾಕತೊಡಗಿದರೆ ಪೆಟ್ಟು ತಿಂದ ವಿಕೆಟ್ ಕೀಪರ್‌ಗೆ ಚೆಂಡು ಹಿಡಿಯುವುದು ಸುಲಭವಲ್ಲ, ವಾಟ್ಲಿಂಗ್ ತಂಡದ ತಂತ್ರದ ಭಾಗವಾಗಿಯೇ ನೋವು ನುಂಗಿಕೊಂಡರು. ಜಡೇಜ ಪೆವಿಲಿಯನ್‌ಗೆ ಹೋದದ್ದರಲ್ಲಿ ತಮ್ಮ ಕ್ಯಾಚ್‌ನ ಕಾಣ್ಕೆ ಇದೆಯೆನ್ನುವುದಕ್ಕಿಂತ ಅವರಿಗೆ ಸಂಭ್ರಮ ಬೇಕೆ? ಪಂದ್ಯದಲ್ಲಿ ವಾಟ್ಲಿಂಗ್ ನಾಲ್ಕು ಕ್ಯಾಚ್‌ಗಳನ್ನು ಪಡೆದದ್ದು ಸಾರ್ಥಕ ಕ್ಷಣ. ಉತ್ಕಟತೆ ಇಟ್ಟುಕೊಂಡ ಆಟಗಾರನೊಬ್ಬ ನೋವು ನೀಗಿಕೊಂಡು ತನ್ನ ಟೆಸ್ಟ್ ಕ್ರಿಕೆಟ್ ಬದುಕಿಗೆ ಹೀಗೆ ಪೂರ್ಣವಿರಾಮ ಹಾಕುವ ಸಂದರ್ಭ ಶ್ಲಾಘನೀಯ.

ವಾಟ್ಲಿಂಗ್ ಮೌನ ಈ ಹೊತ್ತಿನಲ್ಲಿ ದೃಷ್ಟಾಂತದಂತೆ ಕಾಣುತ್ತಿದೆ. ಭಾರತದ ರಿಷಭ್ ಪಂತ್ ವಿಕೆಟ್ ಹಿಂದೆ ಬಡಬಡಿಸುತ್ತಲೇ ಇರುತ್ತಾರೆ. ಭಾರತ ಹಾಗೂ ನ್ಯೂಜಿಲೆಂಡ್ ತಂಡಗಳ ನಡುವೆ ನಡೆದ ಫೈನಲ್‌ನಲ್ಲಿ ಈ ಇಬ್ಬರ ವರ್ತನೆ ಎರಡೂ ತಂಡಗಳ ಮನೋಬಲದ ನಡುವಿನ ವ್ಯತ್ಯಾಸದಂತೆಯೂ ಭಾಸವಾಗುತ್ತದೆ.

ಬ್ರೆಂಡನ್ ಮೆಕ್ಲಮ್ ಎಂಬ ದಾಳಿಕೋರ ಬ್ಯಾಟ್ಸ್‌ಮನ್ ವಿಕೆಟ್ ಕೀಪಿಂಗ್ ಮಾಡಿ, ಬಲಾಢ್ಯವಾಗಿ ಕಟ್ಟಿದ ತಂಡ ನ್ಯೂಜಿಲೆಂಡ್. 2014ರಲ್ಲಿ ತಂಡದ ಜಂಘಾಬಲ ಉಡುಗಿದ್ದಾಗ ಎತ್ತಿ ನಿಲ್ಲಿಸಿದ್ದೇ ಮೆಕ್ಲಮ್. ವಿಶ್ವಮಟ್ಟದ ಟೂರ್ನಿಗಳಲ್ಲಿ ಎರಡು ಸಲ ಫೈನಲ್‌ನಲ್ಲಿ



ಕೊನೆಯ ಟೆಸ್ಟ್ ಪಂದ್ಯದಲ್ಲಿ ವಿಕೆಟ್ ಕೀಪರ್ ಬಿ.ಜೆ. ವಾಟ್ಲಿಂಗ್ ಗೆಲುವಿನ ನಗೆ